ಸಿವಿಲ್ ನ್ಯಾಯಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ, ಬೇಲೂರು

**ಕ್ರಿಮಿನಲ್ ಮಿಸ್.** ನಂ. **625/2021**

ಪಿ.ಡಬ್ಲ್ಯೂ. **1**

-ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕಃ **23-10-2025**

**ಪಾಟೀ ಸವಾಲು: ಎದುರುದಾರರ ಪರ** ಶ್ರೀ ಸಿ ಎಂ ಪಿ ವಕೀಲರಿಂದ

ನಾನು 7ನೇ ತರಗತಿವರೆಗೆ ಓದಿರುತ್ತೇನೆ. ನನ್ನ ಸ್ವಂತ ಊರು ಕುಶಾವರ. ನನ್ನ ತಂದೆ ತಾಯಿಗೆ 3 ಜನ ಮಕ್ಕಳು. ನಾನು ಮತ್ತು ಎದುರುದಾರರು ಮದುವೆಯಾಗಿ 19 ವರ್ಷಗಳಾಗಿರುತ್ತದೆ. ನನಗೆ ಇಬ್ಬರು ಮಕ್ಕಳಿರುತ್ತಾರೆ. ಒಂದು ಗಂಡು ಮತ್ತು ಒಂದು ಹೆಣ್ಣು ಮಗು ಇರುತ್ತದೆ. ನನ್ನ ಮಕ್ಕಳು ಚೆನ್ನೇನಹಳ್ಳಿಯಲ್ಲಿ ಅವರ ಅಜ್ಜ ಅಜ್ಜಿ ಜೊತೆ ವಾಸವಿರುತ್ತಾರೆ. ನಾನು ನನ್ನ ತಂದೆ ತಾಯಿಯೊಂದಿಗೆ ಮೂಡಿಗೆರೆಯಲ್ಲಿ ವಾಸವಿರುತ್ತೇನೆ. ಎದುರುದಾರರು ಎಲ್ಲಿ ವಾಸವಾಗಿದ್ದಾರೆ ಎಂದು ಗೊತ್ತಿಲ್ಲ. ನನ್ನ ಹೆಣ್ಣು ಮಗುವಿಗೆ 18 ವರ್ಷ ವಯಸ್ಸಾಗಿರುತ್ತದೆ. ನನ್ನ ಹೆಣ್ಣು ಮಗಳು ಓದುತ್ತಿಲ್ಲ. ನನ್ನ ಮಗನಿಗೆ 16 ವರ್ಷ ವಯಸ್ಸಾಗಿದ್ದು ಪ್ರಥಮ ಪಿಯುಸಿಯನ್ನು ಜೂನಿಯರ್ ಕಾಲೇಜಿನಲ್ಲಿ ಓದುತ್ತಿದ್ದಾನೆ ಓದುತ್ತಿಲ್ಲ. ನನ್ನ ಮಗಳು ಕಾಲೇಜಿಗೆ ಹೋಗುತ್ತಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಮಗ ಮತ್ತು ಮಗಳು ಎದುರುದಾರರೊಂದಿಗೆ ಚೆನ್ನೇನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ಮಕ್ಕಳ ವಿದ್ಯಾಭ್ಯಾಸವನ್ನು ಎದುರುದಾರರು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**(ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು